ಅದೇ ಎಂದರು. ರಾಜನಿಗೆ ಆಶ್ಚರ್ಯ ಹಾಗೂ ಸಂತೋಷ ಎರಡೂ ಒಟ್ಟಿಗೆ ಆಯ್ತು. ರಾಜ ವೈದ್ಯರು ತೊಗಟೆಯನ್ನು ತೇದು ಅದರ ರಸವನ್ನು ರಾಜಕುಮಾರಿಯ ವ್ರಣಗಳಿಗೆ ಹಚ್ಚಿದರು. ಸ್ವಲ್ಪ ಸಮಯದಲ್ಲಿಯೇ ರಾಜಕುಮಾರಿಯ ವ್ರಣಗಳು ಮಾಯವಾಗಿ ಅವಳು ಸಂಪೂರ್ಣ ಗುಣಮುಖಳಾದಳು.

ತನ್ನ ಕಾಯಿಲೆ ವಾಸಿಯಾದ ಖುಷಿಯಿಂದ ಸುಶೀಲ ತಂದೆಯ ಹತ್ತಿರ ಬಂದು ‘ಅಪ್ಪ, ನನ್ನ ಕಾಯಿಲೆ ವಾಸಿಯಾಗಲು ಕಾರಣವಾದ ಈ ಕೋತಿಯ ಜೊತೆಯಲ್ಲಿ, ಕೊಟ್ಟ ಮಾತಿನಂತೆ, ನನ್ನ ಮದುವೆ ಮಾಡಿ’ ಅಂದಳು. ರಾಜನಿಗೆ ಗಾಬರಿಯಾಯ್ತು. ಮಗಳ ಕೋರಿಕೆಯನ್ನು ನಿರಾಕರಿಸಿದ. ಆದರೆ ಸುಶೀಲ ಪಟ್ಟು ಹಿಡಿದಳು. ಕೋತಿಯ ಜೊತೆ ಮದುವೆ ಮಾಡದಿದ್ರೆ ಅನ್ನ, ನೀರು ತೊರೆದು ಪ್ರಾಣ ಬಿಡುವುದಾಗಿ ಹೇಳಿದಳು. ರಾಜನಿಗೆ ದಿಕ್ಕು ತೋಚದಂತಾದರೂ ಸಾವರಿಸಿಕೊಂಡು ‘ಈಗ ರಾಜಕುಮಾರಿಯ ಇಚ್ಛೆಯಂತೆ ಕೋತಿಯ ಜೊತೆಯಲ್ಲೇ ಅವಳ ಮದುವೆ ಮಾಡಿ, ಕೆಲವು ದಿನಗಳ ನಂತರ ರಾಜಕುಮಾರಿಯ ಮನಸ್ಸು ಬದಲಾಯಿಸಿ ಸೂಕ್ತ ವರನನ್ನು ಹುಡುಕಿ ಮದುವೆ ಮಾಡೋಣ’ ಎಂದು ಯೋಚಿಸಿ ಕೋತಿಯ ಕೈಯಿಂದ ರಾಜಕುಮಾರಿಗೆ ತಾಳಿ ಕಟ್ಟಿಸಿದ. ತಕ್ಷಣವೇ ನೆರೆದಿದ್ದವರೆಲ್ಲಾ ಆಶ್ಚರ್ಯಚಕಿತರಾಗುವಂತೆ ಕೋತಿಯು ಸುಂದರನಾದ ರಾಜಕುಮಾರನಾಗಿ ಬದಲಾಯಿತು. ರಾಜನಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಆಗ ರಾಜಕುಮಾರ ತನ್ನ ವೃತ್ತಾಂತವನ್ನೆಲ್ಲಾ ವಿವರಿಸತೊಡಗಿದ. ‘ನಾನು ಮಹೇಂದ್ರಪುರಿಯ ರಾಜನಾದ ರಾಜಶೇಖರನ ಮಗ ಗುಣಶೇಖರ. ಒಮ್ಮೆ ಯುವತಿಯೊಬ್ಬಳನ್ನು ಕಂಡು, ಆಕೆ ಋಷಿಗಳೊಬ್ಬರ ಪತ್ನಿಯೆಂದು ತಿಳಿಯದೆ, ಆಕೆಯಿಂದ ಆಕರ್ಷಿತನಾಗಿ, ಅವಳನ್ನು ಮದುವೆಯಾಗುವ ಬಯಕೆ ವ್ಯಕ್ತಪಡಿಸಿದೆ. ಚಂಚಲ ಮನಸ್ಸಿನಿಂದ ಮಾಡಿದ ನನ್ನ ತಪ್ಪಿನಿಂದ ಕೋಪಗೊಂಡ ಋಷಿ ಪತ್ನಿ ನನ್ನನ್ನು ಕೋತಿಯಾಗಿ ಕಾಡುಮೇಡುಗಳಲ್ಲಿ ಅಲೆದಾಡುತ್ತಿರುವಂತೆ ಶಪಿಸಿದಳು. ತಿಳಿಯದೆ ಮಾಡಿದ ತಪ್ಪನ್ನು ಕ್ಷಮಿಸುವಂತೆ ಬೇಡಿಕೊಂಡಾಗ, ಕೋತಿಯ ರೂಪದಲ್ಲಿರುವ ನನ್ನನ್ನು ಯುವತಿಯೊಬ್ಬಳು ಮದುವೆಯಾದಾಗ ನನ್ನ ಶಾಪ ವಿಮೋಚನೆಯಾಗುವುದೆಂದು ತಿಳಿಸಿದಳು. ಮಹಾರಾಜ, ನಿಮ್ಮ ಮಗಳಿಗೆ ತಾಳಿ ಕಟ್ಟುತ್ತಿದ್ದಂತೆಯೇ ನನ್ನ ಶಾಪ ವಿಮೋಚನೆಯಾಯಿತು’ ಎಂದ.

ವಿಜಯವರ್ಮನ ಮತ್ತು ಸುಶೀಲಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೂಡಲೆ ಗುಣಶೇಖರನ ತಂದೆ ರಾಜಶೇಖರನಿಗೆ ಸುದ್ದಿ ತಿಳಿಸಿ ಸಕಲ ರಾಜ ಮರ್ಯಾದೆಗಳೊಡನೆ ಅವನನ್ನು ತನ್ನ ರಾಜ್ಯಕ್ಕೆ ಕರೆತರಲು ಏರ್ಪಾಟು ಮಾಡಿದ. ರಾಜಶೇಖರ ತನ್ನ ಬಂಧು ಬಳಗದೊಂದಿಗೆ ಬಂದ ನಂತರ ಗುಣಶೇಖರ ಹಾಗೂ ಸುಶೀಲೆಯ ಮದುವೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ■

# ಶಿವರಾತ್ರಿ

■ ಕೆ.ವಿ. ರಾಜಲಕ್ಷ್ಮಿ
ಕಲೆ: ಸಂತೋಷ್ ಸಸಿಹಿತ್ಲು



ತಿದು ನೋಡು ಶಿವರಾತ್ರಿ
ಜಾಗರಣೆಗಿದು ಶುಭರಾತ್ರಿ

ರುದ್ರತಾಂಡವದ ನಟರಾಜ
ಇವನ ಮಾವನೇ ಗಿರಿರಾಜ

ಚರ್ಮಾಂಬರಧರ ಇವನಣ್ಣ
ಮಾರನ ಕೊಂದ ಮುಕ್ಕಣ್ಣ

ಗಂಗೆಯ ಧರಿಸಿದ ಜಟೆಯಲ್ಲಿ
ಡಮರುಗ ಆಡಿತು ಕೈಯಲ್ಲಿ

ಅಭಿಷೇಕ ಪ್ರಿಯ ಇವನಂತೆ
ತುಂಬೆ, ಬಿಲ್ವಪತ್ರೆ ಸಾಕಂತೆ

ಭಕ್ತಿಗೆ ಒಲಿವನು ಇವನಪ್ಪ
ಸಾಕ್ಷಿ, ಬೇಡರ ಕಣ್ಣಪ್ಪ !

## ಕುಂಚ ಪ್ರಪಂಚ



**ಹಿತಾ ನಾಚಪ್ಪ**
7ನೇ ತರಗತಿ, ಕ್ಯಾಸಲಿಸ್ ಪ್ರೌಢಶಾಲೆ, ಬೆಂಗಳೂರು

